ಮಡಿಕೇರಿ ತಾಲ್ಲೂಕಿನಲ್ಲಿ ಕೆಲವು ರಸ್ತೆಗಳನ್ನು ಸರ್ವಋತು ರಸ್ತೆಯನ್ನಾಗಿಸುವುದು

2886:(3892)

ಶ್ರೀ ಡಿ.ಎನ್.ಮಾದಪ್ಪ (ಮಡಿಕೇರಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮಡಿಕೇರಿ ತಾಲ್ಲೂಕಿನ ಜಟ್ಟಿ ಮಾಸಿದಬ್ಬಡ್ಕ ಕಾಂತಬೈಲು ಕಲ್ಲುಗುಂಡಿ ರಸ್ತೆಯ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮವೇನು?

2) ಈ ರಸ್ತೆಯನ್ನು ಅಭಿವೃದ್ಧಿಯಾದಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ನೇರ ಸಂಪರ್ಕ ರಸ್ತೆಯಾಗಲಿರುವುದು ಸರ್ಕಾರಕ್ಕೆ ತಿಳಿದಿದೆಯೇ?

3) ಈ ರಸ್ತೆಯು ಅಭಿವೃದ್ಧಿಗೊಂಡಲ್ಲಿ ಸರ್ವಋತು ರಸ್ತೆಯಾಗಿ ದಕ್ಷಿಣ ಕನ್ನಡ ಜಿಲ್ಲೆಯಿಂದ ತಲಕಾವೇರಿ ಕ್ಷೇತ್ರದ ಹತ್ತಿರದ ರಸ್ತೆಯಾಗಲಿರುವುದರಿಂದ ಸರ್ಕಾರ ಇದರ ಅಭಿವೃದ್ಧಿ ಅನುದಾನವನ್ನು ಹೆಚ್ಚಿಸುವುದೆ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

1) ಸದರಿ ರಸ್ತೆಯು ಜಿಲ್ಲಾ ಪಂಚಾಯತ್ ರಸ್ತೆ ಆಗಿದ್ದು ಒಟ್ಟು 19.20 ಕಿಮಿ ಉದ್ದವಿದ್ದು, ಕಲ್ಲುಗುಂಡಿ ಕಡೆಯಿಂದ 1996 ಮಾರ್ಚ್ ಅಂತ್ಯದವರೆಗೆ 4.65 ಕಿಮಿ ರಸ್ತೆಯನ್ನು ಡಾಂಬರೀಕರಿಸಿದ್ದು, ಚೆಟ್ಟಿ ಮಾಸಿ ಕಡೆಯಿಂದ 6.05 ಕಿಮಿ ಉದ್ದ ಡಾಂಬರೀಕರಣಗೊಂಡಿದ್ದು, ಉಳಿದ 8.50 ಕಿಮಿ ಉದ್ದದ ಮಧ್ಯಭಾಗದ ರಸ್ತೆಯನ್ನು ಅಭಿವೃದ್ಧಿಪಡಿಸಲು ಜಿಲ್ಲೆಗೆ ಒದಗಿಸಿರುವ ಅನುದಾನದಲ್ಲಿ ಹಂತ ಹಂತವಾಗಿ ರಸ್ತೆ ಅಭಿವೃದ್ಧಿ ಕ್ರಮ ಕೈಗೊಳ್ಳಲಾಗುತ್ತಿದೆ;

2) ಹೌದು

3) ಅನುದಾನದ ಲಭ್ಯತೆಯ ಮೇರೆಗೆ ಕ್ರಮ ತೆಗೆದುಕೊಳ್ಳಲಾಗುವುದು.

ಕೊಡಗು ಜಿಲ್ಲೆಯ ಅರಣ್ಯದಲ್ಲಿ ದಾಖಲಾಗಿರುವ ಮೊಕದ್ದಮೆಗಳು.

2888:(3895)

ಶ್ರೀ ಡಿ.ಎನ್.ಮಾದಪ್ಪ (ಮಡಿಕೇರಿ): ಮಾನ್ಯಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ 1994-95ರಿಂದ 1997-98ರ ವರೆಗೆ ದಾಖಲಾಗಿರುವ ಅರಣ್ಯ ಮೊಕದ್ದಮೆಗಳ ಸಂಖ್ಯೆ ಎಷ್ಟು?

ಆ) ಸರ್ಕಾರ ಅನ್‌ರಿಡೀಂ ಜಾಗದಲ್ಲಿ ಮರ ಕಡಿಯುವುದನ್ನು ನಿಷೇಧಿಸಿದ ನಂತರದ ಅವಧಿಯಲ್ಲಿ ಎಫ್.ಒ.ಸಿ. ಮಾಡಿದ ಮರಗಳ ವಿವರಗಳೆಷ್ಟು?

ಇ) ಇಲ್ಲಿಯವರೆಗೂ ಎಫ್.ಒ.ಸಿ.ಯ ಪ್ರಕರಣದ ಮರಗಳ ಒಟ್ಟು ಮೌಲ್ಯವೆಷ್ಟು? ಎಷ್ಟು ಘನ ಮಿಟರ್ ಮತ್ತು ಯಾವ ಯಾವ ಜಾತಿಗೆ ಸೇರಿದ ಮರಗಳು?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

ಅ) ಕೊಡಗು ಜಿಲ್ಲೆಯಲ್ಲಿ 1994-95 ರಿಂದ 1997-98ರ ವರೆಗೆ ದಾಖಲಾದ ಅರಣ್ಯ ಅಪರಾಧಗಳು ಈ ಕೆಳಗಿನಂತಿದೆ:-

ವರ್ಷ	ಮಡಿಕೇರಿ ವಿಭಾಗ	ವಿರಾಜಪೇಟೆ ವಿಭಾಗ	ಅರಣ್ಯ ಸಂಚಾರಿ ದಳ, ಮಡಿಕೇರಿ	ಒಟ್ಟು
1994-95	431	360	132	923
1995-96	363	126	104	593
1996-97	475	157	134	766
1997-98	711	127	150	988

ಆ) ನಿಷೇಧ ಆದೇಶದ ಬಂದ ನಂತರ ಒಟ್ಟು 1965 ಪ್ರಕರಣಗಳಿದ್ದು ಅವುಗಳಲ್ಲಿ 22290.597 ಘ.ಮಿ. ನಾಟಾ ಹಾಗೂ 23577.560 ಘ.ಮಿ. ಸೌದೆ ಸೇರಿದೆ. ವಿವರ ಈ ಕೆಳಗಿನಂತಿದೆ:-

	ಮಡಿಕೇರಿ ವಿಭಾಗ	ವಿರಾಜಪೇಟೆ ವಿಭಾಗ	ಅರಣ್ಯ ಸಂಚಾರಿ ದಳ, ಮಡಿಕೇರಿ	ಒಟ್ಟು
ಪ್ರಕರಣಗಳು	1842	45	78	1965

ನಾಟಾಗಳು	13972.034 ಘ.ಮಿ.	6569.892 ಘ.ಮಿ.	1748.671 ಘ.ಮಿ.	22290.597 ಘ.ಮಿ.
ಸೌಧೆ	16149.767 ಘ.ಮಿ.	4743.853 ಘ.ಮಿ.	2683.940 ಘ.ಮಿ.	23577.560 ಘ.ಮಿ.

ಇ) ಇಲ್ಲಿಯವರೆಗೆ ಎಫ್.ಒ.ಸಿ. ಆದ ಪ್ರಕರಣಗಳ ಮರಗಳ ಒಟ್ಟು ಮೌಲ್ಯ ರೂ. 3,56,22,892.00 ವಿವರಗಳು ಈ ಕೆಳಗಿನಂತಿವೆ:-

	ಮಡಿಕೇರಿ ವಿಭಾಗ	ವಿರಾಜಪೇಟೆ ವಿಭಾಗ	ಅರಣ್ಯ ಸಂಚಾರಿ ದಳ, ಮಡಿಕೇರಿ
ಒಟ್ಟು ಮೌಲ್ಯ	ರೂ. 1,87,55,813	ರೂ. 1,19,81,290	ರೂ. 48,85,789
ಮರಗಳ ಜಾತಿಗಳು:	ಶ್ರೀಗಂಧ, ತೇಗ ಬೀಟಿ, ಕಾಡುಜಾತಿ	ಶ್ರೀಗಂಧ, ಬೀಟಿ ತೇಗ, ಹೆಬ್ಬಲಸು ಬೆಳ್ಳಗಿಲು ನೇರಳೆ, ಹಲಸು, ನಂದಿ ಹೊನ್ನೆ ಕುಳುರಮಾವು, ಮಾವು ಇತರ ಕಾಡುಜಾತಿ	ಬೀಟಿ, ತೇಗ, ಬಳಂಜಿ, ಹೊನ್ನೆ ನಂದಿ, ಕರಡಿ, ಇತರೆ ಕಾಡುಜಾತಿ

ಬೈಲಹೊಂಗಲ ತಾಲ್ಲೂಕಿನಲ್ಲಿ ಪಶುಚಿಕಿತ್ಸಾಲಯ ತೆರೆಯುವುದು.

2889:(3878)

ಶ್ರೀ ಮಹಾಂತೇಶ ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಗೋವಿನಕೊಪ್ಪ ಹಾಗೂ ಸವದತ್ತಿ ತಾಲ್ಲೂಕಿನ, ಮಾಟೊಳ್ಳಿ ಗ್ರಾಮಗಳಲ್ಲಿ ಪಶುಚಿಕಿತ್ಸಾಲಯವನ್ನು ತೆರೆಯಬೇಕೆಂದು ಮನವಿಗಳು ಏನಾದರೂ ಸರಕಾರಕ್ಕೆ ಬಂದಿವೆಯೇ?